ಅ) ಮಾನ್ಯ ಮುಖ್ಯ ಮಂತ್ರಿಯವರ ಆದೇಶದಂತೆ ಕಾರ್ಯನಿರ್ವಾಹಕ ಅಭಿಯಂತರರು ಸಣ್ಣ ನೀರಾವರಿ ಇಲಾಖೆ, ಗುಲ್ಬರ್ಗಾ ಇವರು ತನ್ನ ಪತ್ರ ಸಂಖ್ಯೆ :3193 ದಿನಾಂಕ 6-9-1993ರಂದು ಈ ಎರಡು ಬ್ಯಾರೇಜ್-ಕಂ-ಸೇತುವೆಗಳ ನಿರ್ಮಾಣಕ್ಕಾಗಿ ಪ್ರಥಮ ತನಿಖೆ ವರದಿಗೆ ಅನುಮೋದನೆ ನೀಡಲು ಅಧೀಕ್ಷಕ ಅಭಿಯಂತರರಿಗೆ ಕೋರಿದ್ದಕ್ಕೆ ಅನುಮೋದನೆ ನೀಡಲಾಗಿದೆಯೇ;

ಇ) ಮಾನ್ಯ ಮುಖ್ಯ ಮಂತ್ರಿಯವರ ಆದೇಶದಂತೆ ಅನುಮೋದನೆ ನೀಡಿ ಇದೇ ವರ್ಷ 93-94ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ನೀಡಿರುವ ವಿಶೇಷ ಅನುದಾನದಲ್ಲಿ ಮಂಜೂರು ನೀಡಿ ಆ ಭಾಗದ ನಾಗರೀಕರಿಗೆ ನೀರಾವರಿ ಹಾಗೂ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುವುದೇ?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಇಲ್ಲ.

ಇ) ಈ ಕಾಮಗಾರಿಗಳು 1993-94 ಸಾಲಿನ ಆಯವ್ಯಯದಲ್ಲಿ ಸೇರಿಲ್ಲ ಮತ್ತು ಇದುವರೆವಿಗೂ ಸಣ್ಣ ನೀರಾವರಿಗೆ ಸಾಲಿನಲ್ಲಿ ಯಾವ ವಿಶೇಷ ಅನುದಾನವು ಒದಗಿಸಿಲ್ಲ. ಅದರಿಂದ ಈ ಯೋಜನೆಗಳನ್ನು ಮಂಜೂರು ಮಾಡುವ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಚನ್ನಪಟ್ಟಣ ತಾಲ್ಲೂಕಿನಲ್ಲಿ ನೀರಾವರಿ ಪಂಪ್ ಸೆಟ್ಟುಗಳಿಗೆ ವಿದ್ಯುತ್ ಸರಬರಾಜು

247 - ಶ್ರೀ ಸಾದತ್ ಅಲಿಖಾನ್ (ಚನ್ನಪಟ್ಟಣ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣ ತಾಲ್ಲೂಕಿನಲ್ಲಿ 4 ವರ್ಷಗಳಿಂದ ಎಷ್ಟು ಜನರಿಗೆ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ತನ್ನು ಒದಗಿಸಲಾಗಿದೆ (ವರ್ಷವಾರು ಮಾಹಿತಿಯನ್ನು ನೀಡುವುದು)

ಆ) ಚನ್ನಪಟ್ಟಣ ತಾಲ್ಲೂಕಿನಲ್ಲಿ 4 ವರ್ಷಗಳಿಂದ ಭಾಗ್ಯ ಜ್ಯೋತಿಯಡಿಯಲ್ಲಿ ಮನೆಗಳಿಗೆ ವಿದ್ಯುತ್ ಸಂಪರ್ಕ ಪಡೆದವರ ಒಟ್ಟು ಸಂಖ್ಯೆ ಎಷ್ಟು? (ವರ್ಷವಾರು ಮಾಹಿತಿ ನೀಡುವುದು)

ಇ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ನೀಡಲು ಸರ್ಕಾರದಲ್ಲಿ ಬಾಕಿ ಉಳಿದಿರುವ ಅರ್ಜಿಗಳ ಒಟ್ಟು ಸಂಖ್ಯೆ?

ಈ) ನೀರಾವರಿ ಪಂಪುಸೆಟ್ಟುಗಳ ಮತ್ತು ಭಾಗ್ಯಜ್ಯೋತಿ ಯೋಜನೆಯಡಿ ಮನೆಗಳಿಗೆ ವಿದ್ಯುತ್ ಸಂಪರ್ಕದ ಅನುಕೂಲ ಒದಗಿಸಲು ಇರುವ ಗುರಿಗಳನ್ನು ಪೂರ್ಣಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಏನು?

ಶ್ರೀ ಕೆ.ಎ. ನಿಸಾರ್ ಅಹಮದ್ (ಇಂಧನ ರಾಜ್ಯ ಸಚಿವರು) :

ಅ) 4 ವರ್ಷಗಳಲ್ಲಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜುಗೊಳಿಸಿರುವ ನೀರಾವರಿ ಪಂಪು ಸೆಟ್ಟುಗಳ ಒಟ್ಟು ಸಂಖ್ಯೆ 2917 ವರ್ಷವಾರು ಮಾಹಿತಿಯು ಈ ಕೆಳಕಂಡಂತಿದೆ :

1)	1989-90	-	550
2)	1990-91	-	993
3)	1991-92	-	904
4)	1992-93	-	470

ಆ) ನಾಲ್ಕು ವರ್ಷಗಳಲ್ಲಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ಭಾಗ್ಯಜ್ಯೋತಿಯಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆದಿರುವ ಮನೆಗಳ ಸಂಖ್ಯೆ 1783.

ವರ್ಷವಾರು ಮಾಹಿತಿಯು ಈ ಕೆಳಗಿನಂತಿದೆ:

1) 1989-90 - 200
2) 1990-91 - 316
3) 1991-92 - 268
4) 1992-93 - 999

ಇ) ಬಾಕಿ ಉಳಿದಿರುವ ಒಟ್ಟು ಅರ್ಜಿಗಳ ಸಂಖ್ಯೆ 345.

ಈ) ಪ್ರಸಕ್ತ ಸಾಲಾದ 1993-94ರಲ್ಲಿ ಚನ್ನಪಟ್ಟಣ ತಾಲ್ಲೂಕಿನಲ್ಲಿ 350 ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣಕ್ಕೆ ಗುರಿ ನಿಗಧಿ ಪಡಿಸಲಾಗಿದೆ. ಜನವರಿ 94ರ ಅಂತ್ಯದ ವೇಳೆಗೆ 264 ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಿಸಲಾಗಿದೆ. ಮಾರ್ಚ್ 94ರ ಅಂತ್ಯದ ವೇಳೆಗೆ ಗುರಿಯನ್ನು ಸಾಧಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಪ್ರಸಕ್ತ ಸಾಲಾದ 1993-94ರಲ್ಲಿ ಚನ್ನಪಟ್ಟಣ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರದಲ್ಲಿ 1000 ಭಾಗ್ಯಜ್ಯೋತಿ ಇನ್ವಲೇಷನ್ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಗುರಿ ನಿಗಧಿಪಡಿಸಲಾಗಿದೆ. ಈ ಕಾರ್ಯವು ಪ್ರಗತಿಯಲ್ಲಿದೆ. ಈ ಎಲ್ಲಾ 1000 ಭಾಗ್ಯಜ್ಯೋತಿ ಇನ್ವಲೇಷನ್ಗಳಿಗೆ ಮಾರ್ಚ್ 94ರ ಅಂತ್ಯದ ವೇಳೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೆರೆಗಳ ಹೂಳೆತ್ತುವ ಬಗ್ಗೆ

246 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣದಲ್ಲಿ ಕೆರೆಗಳ ಹೂಳೆತ್ತುವ ಒಟ್ಟು ಎಷ್ಟು ಪ್ರಸ್ತಾವನೆಗಳು ಸರ್ಕಾರದಲ್ಲಿ ಬಾಕಿ ಉಳಿದಿವೆ (ವಿವರಗಳನ್ನು ಒದಗಿಸುವುದು);

ಆ) ಹಾಲಿ ವರ್ಷದಲ್ಲಿ ಎಷ್ಟು ಕೆರೆಗಳ ಹೂಳೆತ್ತುವುದನ್ನು ತೆಗೆದುಕೊಳ್ಳಬೇಕಾಗಿದೆ. (ವಿವರಗಳನ್ನು ಒದಗಿಸುವುದು).

ಇ) ಇಗ್ಗಲೂರು ಯೋಜನೆಯಿಂದ ನೆರಳೂರು ಕೆರೆಗೆ ನೀರೆತ್ತುವ ಪ್ರಸ್ತಾವನೆಯು ಸರ್ಕಾರದಲ್ಲಿ ಕಳೆದ ಮೂರು ವರ್ಷಗಳಿಂದ ಬಾಕಿ ಉಳಿದಿರುವುದು ನಿಜವೇ?

ಈ) ಹಾಗಿದ್ದಲ್ಲಿ, ಸರ್ಕಾರವು ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಉ) ಇದನ್ನು ಯಾವಾಗ ತೆಗೆದುಕೊಳ್ಳಲಾಗುವುದು?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಯಾವುದೂ ಇಲ್ಲ.

ಆ) ಯಾವುದೂ ಇಲ್ಲ.

ಇ) ಇಗ್ಗಲೂರು ಬ್ಯಾರೇಜ್ ಯೋಜನೆಯ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಆಗಿರುವ ಅಂದಾಜಿನಲ್ಲಿ ಇಗ್ಗಲೂರು ಯೋಜನೆಯಿಂದ ನೆರಳೂರು ಕೆರೆಗೆ ಪಂಪು ಮೂಲಕ ನೀರೊದಗಿಸುವ ಬಗ್ಗೆ ಅವಕಾಶ ಕಲ್ಪಿಸಿರುವುದಿಲ್ಲ. ಆದುದರಿಂದ ಈ ಪ್ರಸ್ತಾವನೆಯೂ ಸರ್ಕಾರದಲ್ಲಿ ಬಾಕಿ ಉಳಿದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.